# ಯುವ ಚಟುವಟಿಕೆಗಳು

1. **ಯುವ ಸಂಘಗಳ ನೊಂದಾವಣೆ :** ಯುವ ಜನರು ಯುವಕ ಸಂಘ ಮತ್ತು ಯುವತಿ ಸಂಘಗಳನ್ನು ಸಹಕಾರ ಸಂಘಗಳ ನೊಂದಣಿ ಕಛೇರಿಯಲ್ಲಿ ನೊಂದಾಯಿಸಿಕೊಂಡು ತದನಂತರ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಮಾನ್ಯತೆ ಪಡೆಯಬೇಕಾಗಿರುತ್ತದೆ. ಇದಕ್ಕಾಗಿ ಸಹಕಾರ ಸಂಘಗಳ ನೊಂದಣಿ ಪತ್ರ ಹಾಗೂ ಆ ಇಲಾಖೆಯಲ್ಲಿ ನೀಡಲಾದ ದಾಖಿಲಾತಿಗಳ ಪ್ರತಿಯನ್ನು ನೀಡಿ ಸರ್ಕಾರದ ಲೆಕ್ಕ ಖಾತೆಗೆ ಯುವಜನ ಸಂಸ್ಥೆಯಾದಲ್ಲಿ ರೂ.100/-, ಯೋಜನೇತರ ಸಂಸ್ಥೆಯಾದಲ್ಲಿ ರೂ. 500/- ಗಳನ್ನು ಪಾವತಿಸಿ ಮಾನ್ಯತೆ ಪಡೆಯಬೇಕಾಗಿರುತ್ತದೆ.

2. **ಯುವಜನ ಮೇಳ:** ಯುವಜನರಿಗೆ ಗ್ರಾಮೀಣ ಜಾನಪದ ಕಲಾ ಪ್ರಾಕಾರಗಳಾದ ಡೊಳ್ಳುಕುಣಿತ, ಕೋಲಾಟ, ವೀರಗಾಸೆ, ಭಾವಗೀತೆ, ಜಾನಪದ ಗೀತೆ, ಜಾನಪದ ನೃತ್ಯ, ಗೀಗೀ ಪದ, ಲಾವಣಿ, ಸೋಬಾನೆ, ಬೀಸುವ ಪದ, ಭಜನೆ, ದೊಡ್ಡಾಟ, ಸಣ್ಣಾಟ, ಯಕ್ಷಗಾನ, ಚರ್ಮವಾದ್ಯ ಮೇಳ, ಏಕಪಾತ್ರಾಭಿನಯ ಮುಂತಾದ ಸ್ಪರ್ಧೆಗಳನ್ನು ಆಯೋಜಿಸಲಾಗುವುದು.

   ಜಿಲ್ಲಾ ಮಟ್ಟದಿಂದ ರಾಜ್ಯ ಮಟ್ಟದವರೆಗೆ ಸ್ಪರ್ಧೆಗಳನ್ನು ನಡೆಸಿ ವಿಜೇತರಿಗೆ ಬಹುಮಾನ ನೀಡಲಾಗುವುದು. 16ರಿಂದ 30 ವರ್ಷಗಳ ಎಲ್ಲಾ ಸ್ತರಗಳ ಯುವಜನರು ಈ ಕಾರ್ಯಕ್ರಮದ ಪ್ರಯೋಜನ ಪಡೆದುಕೊಳ್ಳಬಹುದು.

3. **ಯುವಜನೋತ್ಸವ:** ಯುವಜನರಲ್ಲಿ ಸಾಂಸ್ಕೃತಿಕ ಪ್ರತಿಭೆಯನ್ನು ಗುರುತಿಸಿ, ಪ್ರೋತ್ಸಾಹಿಸಲು ಪ್ರತಿ ವರ್ಷ ಜಿಲ್ಲಾಮಟ್ಟ, ರಾಜ್ಯಮಟ್ಟ, ಹಾಗೂ ರಾಷ್ಟ್ರಮಟ್ಟದಲ್ಲಿ ಯುವಜನೋತ್ಸವ ಗಳನ್ನು ನಡೆಸಲಾಗುವುದು. ಇದರ ಅಂಗವಾಗಿ ಶಾಸ್ತ್ರೀಯ ಸಂಗೀತ (ಕರ್ನಾಟಕ, ಹಿಂದೂಸ್ಥಾನಿ), ಶಾಸ್ತ್ರೀಯ ನೃತ್ಯ (ಭರತನಾಟ್ಯ, ಕೂಚುಪುಡಿ, ಕಥಕ್ಕಳಿ, ಮಣಿಪುರಿ, ಒಡಿಸ್ಸಿ), ಶಾಸ್ತ್ರೀಯ ಲಘು ವಾದ್ಯ (ಕೊಳಲು, ಸಿತಾರ್, ತಬಲ, ವೀಣೆ, ಮೃದಂಗ, ಹಾರ್ಮೋನಿಯಂ, ಗಿಟಾರ್) ಜಾನಪದ ಗೀತೆ, ಜಾನಪದ ನೃತ್ಯ, ಏಕಾಂಕ ನಾಟಕ, ಆಶುಭಾಷಣ ಸ್ಪರ್ಧೆಗಳನ್ನು 16 ರಿಂದ 29 ವರ್ಷಗಳ ವಯೋಮಾನದ ಯುವಜನರಿಗಾಗಿ ಏರ್ಪಡಿಸಲಾಗುವುದು. ರಾಜ್ಯ ಮಟ್ಟದಲ್ಲಿ ವಿಶೇಷ ಸಾಧನೆ ಮಾಡಿದ ಯುವಜನರನ್ನು ರಾಷ್ಟ್ರೀಯ ಯುವಜನೋತ್ಸವಕ್ಕೆ ನಿಯೋಜಿಸಲಾಗುವುದು. ರಾಜ್ಯದಲ್ಲಿ ಪ್ರಚಲಿತವಿರುವ ಎರಡು ಜಾನಪದ ನೃತ್ಯ ಪ್ರದರ್ಶನ ತಂಡಗಳನ್ನು ವಿಶೇಷ ಕಾರ್ಯಕ್ರಮ ನೀಡಲು ರಾಷ್ಟ್ರೀಯ ಯುವಜನೋತ್ಸವಕ್ಕೆ ಕಳುಹಿಸಿಕೊಡಲು ಅವಕಾಶವಿದೆ.

4. **ನಮ್ಮೂರ ಶಾಲೆಗೆ ನಮ್ಮ ಯುವಜನರು ಕಾರ್ಯಕ್ರಮ:** ಸ್ಥಳೀಯ ಶಾಲಾಭಿವೃದ್ಧಿ, ಕ್ರೀಡಾಭಿವೃದ್ಧಿ ಹಾಗೂ ಶೈಕ್ಷಣಿಕ ಪ್ರಗತಿಗಾಗಿ ಕ್ರೀಡೆಯಲ್ಲಿ ವಿಶೇಷ ಸಾಧನೆ ಮಾಡಿದ ಸರ್ಕಾರಿ ಶಾಲೆಗಳಿಗೆ ತಾಲ್ಲೂಕಿಗೆ ಒಂದರಂತೆ ಗುರುತಿಸಿ ರೂ. 1.00 ಲಕ್ಷಗಳ ನಗದು ಪುರಸ್ಕಾರ ನೀಡುವ ಮೂಲಕ ಪ್ರೋತ್ಸಾಹಿಸಲಾಗುತ್ತದೆ.

5. **ಯುವ ಸ್ಪಂದನ:** ನಿಮ್ಹಾನ್ಸ್ ಸಂಸ್ಥೆಯ ಸಹಯೋಗದೊಂದಿಗೆ ಯುವಜನರಿಗೆ ಮತ್ತು ಪೋಷಕರಿಗೆ ಆಪ್ತ ಸಮಾಲೋಚನಾ ಸೌಲಭ್ಯ ಒದಗಿಸುವ ಮತ್ತು ಯುವಜನರನ್ನು ಆಪ್ತ ಸಮಾಲೋಚಕರಾಗಿ ಕಾರ್ಯ ನಿರ್ವಹಿಸಲು ತರಬೇತಿ ನೀಡುವ ಕಾರ್ಯಕ್ರಮ.

6. **ಯುವ ಶಕ್ತಿ ಕೇಂದ್ರ:** ಪ್ರತಿ ವರ್ಷ ಪ್ರತಿ ಜಿಲ್ಲೆಯ ಒಂದು ಆಯ್ದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ತಲಾ ರೂ. 15.00 ಲಕ್ಷಗಳ ವೆಚ್ಚದಲ್ಲಿ ಮಲ್ಟಿಜಿಮ್ ಸೌಲಭ್ಯಗಳನ್ನು ಒಳಗೊಂಡ ಯುವ ಶಕ್ತಿ ಕೇಂದ್ರ ಸ್ಥಾಪಿಸಲಾಗುವುದು.

7. **ಯುವಜನ ತರಬೇತಿ:** ರಾಜ್ಯದ ಯುವಜನರಿಗೆ ಸೋಲಾರ್ ಲೈಟಿಂಗ್, ಮೊಬೈಲ್ ರಿಪೇರಿ, ಬ್ಯೂಟಿಷಿಯನ್ ಕೋರ್ಸ್, ನಿರೂಪಣೆ ಮತ್ತು ಸುದ್ದಿವಾಚಕರು ಮುಂತಾದ ವಿವಿಧ ಕೌಶಲ್ಯಗಳಲ್ಲಿ ತರಬೇತಿ ನೀಡಿ ಸ್ವಯಂ ಉದ್ಯೋಗ ಸ್ಥಾಪಿಸಲು ಅಗತ್ಯ ತಾಂತ್ರಿಕ ತರಬೇತಿ ನೀಡಲಾಗುವುದು.

8. **ಯುವ ಸಹಾಯವಾಣಿ :** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಉಚಿತ **24x7** ಸಹಾಯವಾಣಿಯನ್ನು ಪ್ರಾರಂಭಿಸಲಾಗಿದ್ದು, ಇಲಾಖಾ ಕಾರ್ಯಕ್ರಮಗಳ ಬಗ್ಗೆ ಹಾಗೂ ಯುವ ಸಂಬಂಧಿ ವಿಷಯಗಳ ಬಗ್ಗೆ ಮಾರ್ಗ ದರ್ಶನ ನೀಡಲಾಗುತ್ತಿದೆ. ಸಹಾಯವಾಣಿ ಸಂಖ್ಯೆ **1800 425 1448** ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.

9. **ಯುವ ಸಂಘ / ಸಂಸ್ಥೆಗಳಿಗೆ ಕ್ರೀಡಾ ಸಾಮಾಗ್ರಿ ಪೂರೈಕೆ** : ಗ್ರಾಮೀಣ ಪ್ರದೇಶದಲ್ಲಿ ಕ್ರೀಡಾ ತರಬೇತಿಗಾಗಿ ನೊಂದಾಯಿತ ಯುವ / ಕ್ರೀಡಾ ಸಂಘ ಸಂಸ್ಥೆಗಳಿಗೆ ಕ್ರೀಡಾ ಸಾಮಾಗ್ರಿಗಳನ್ನು / ಸಾಂಸ್ಕೃತಿಕ ಸಾಮಾಗ್ರಿಗಳನ್ನು ಒದಗಿಸಲಾಗುವುದು.

10. **ಯುವ ಕ್ರೀಡಾ ಮಿತ್ರ:** ಪ್ರತಿ ಹೋಬಳಿಯ ಒಂದು ಯುವ/ ಕ್ರೀಡಾ ಸಂಘ/ಸಂಸ್ಥೆಯನ್ನು ಗುರುತಿಸಿ ಕ್ರೀಡಾ ಚಟುವಟಿಕೆಗಳನ್ನು ಆಯೋಜಿಸಲು ಮತ್ತು ಕ್ರೀಡಾ ಪ್ರತಿಭೆಗಳನ್ನು ಗುರುತಿಸಿ ಇಲಾಖೆಯ ಕ್ರೀಡಾಶಾಲೆ ನಿಲಯಗಳಿಗೆ ಕಳುಹಿಸಲು ರೂ. 25,000/-ಗಳ ಪ್ರೋತ್ಸಾಹಧನವನ್ನು/ ಕ್ರೀಡಾ ಸಾಮಗ್ರಿಗಳನ್ನು ನೀಡಲಾಗುವುದು.

11. **ಜಾನಪದ ತರಬೇತಿ ಶಿಬಿರ** : ಮೂಲ ಜಾನಪದ ಸಂಸ್ಕೃತಿಯನ್ನು ಉಳಿಸುವ ಉದ್ದೇಶದಿಂದ ಜಿಲ್ಲೆಯ ಯುವಕ ಹಾಗೂ ಯುವತಿಯರಿಗೆ ಕಂಸಾಳೆ, ಕೋಲಾಟ, ವೀರಗಾಸೆ, ಡೊಳ್ಳು ಕುಣಿತ, ಗೊರವರ ಕುಣಿತ, ಪೂಜಾ ಕುಣಿತ, ಸೋಮನ ಕುಣಿತ, ಲಾವಣಿ, ಭಜನೆ ಇತ್ಯಾದಿ ಜಾನಪದ ಪ್ರಾಕಾರಗಳನ್ನು ಮೂಲ ತರಬೇತಿದಾರರಿಂದ ಆಸಕ್ತ ಯುವ ಸಂಘಗಳ ಸಹಯೋಗದೊಂದಿಗೆ ತರಬೇತಿ ನೀಡಲಾಗುವುದು.

12. **ಯುವ ಸಪ್ತಾಹ** : ಸ್ವಾಮಿ ವಿವೇಕಾನಂದ ಜನ್ಮ ದಿನಾಚರಣೆ ಅಂಗವಾಗಿ ಪ್ರತೀ ವರ್ಷ ಜನವರಿ 12 ರಿಂದ 19 ರ ವರೆಗೆ ಜಿಲ್ಲೆಯ ಯುವ ಸಂಘ/ಸಂಸ್ಥೆಗಳ ಸಹಯೋಗದಲ್ಲಿ ಯುವ ಸಪ್ತಾಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಈ ಅಂಗವಾಗಿ ಸ್ವಾಮಿ ವಿವೇಕಾನಂದರ ಕುರಿತಂತೆ ವಿವಿಧ ಸ್ಪರ್ಧೆಗಳು, ಪ್ರವಚನ, ಜಾಥಾ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

13. **ಸಾಹಸ ತರಬೇತಿ ಶಿಬಿರ** : ಯುವಜನರಲ್ಲಿ ಸಾಹಸ ಪ್ರವೃತ್ತಿಯನ್ನು ಉತ್ತೇಜಿಸಲು ಭೂ ಸಾಹಸ, ಜಲಸಾಹಸ, ವಾಯು ಸಾಹಸ ತರಬೇತಿ ಶಿಬಿರಗಳನ್ನು ಹಾಗೂ ಟ್ರಕ್ಕಿಂಗ್, ಪರ್ವತಾರೋಹಣ, ಪರಿಸರ ಅಧ್ಯಯನ ಮುಂತಾದ ರಚನಾತ್ಮಕ ಚಟುವಟಿಕೆಗಳನ್ನು ಆಯೋಜಿಸಲಾಗುತ್ತಿದೆ. ಆಸಕ್ತ ಯುವಜನರು ಈ ಸೌಲಭ್ಯಗಳ ಪ್ರಯೋಜನವನ್ನು ಉಚಿತವಾಗಿ ಪಡೆಯಬಹುದಾಗಿದೆ.

14. **ಬೇಸಿಗೆ ತರಬೇತಿ ಶಿಬಿರ** : ಪ್ರತಿ ವರ್ಷ ಬೇಸಿಗೆ ಅವಧಿಯಲ್ಲಿ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ನುರಿತ ತರಬೇತುದಾರರಿಂದ ಉಚಿತವಾಗಿ ವೈಜ್ಞಾನಿಕ ಕ್ರೀಡಾ ತರಬೇತಿಯನ್ನು ಪ್ರತಿ ತಾಲ್ಲೂಕಿನಲ್ಲಿ ಆಯೋಜಿಸಲಾಗುತ್ತಿದೆ.

## ಕ್ರೀಡಾ ಚಟುವಟಿಕೆಗಳು

1. **ಕ್ರೀಡಾ ವಿದ್ಯಾರ್ಥಿ ವೇತನ:** ರಾಜ್ಯ ಮಟ್ಟದ ಅಧಿಕೃತ ಕ್ರೀಡಾಕೂಟಗಳಲ್ಲಿ ಪ್ರಥಮ ಸ್ಥಾನ ಮತ್ತು ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸಿದ ಮಾಧ್ಯಮಿಕ ಮತ್ತು ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಕ್ರೀಡಾ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ. 10,000/-ಗಳ ವಿದ್ಯಾರ್ಥಿ ವೇತನವನ್ನು ಆರ್.ಟಿ.ಜಿ.ಎಸ್. ಮೂಲಕ ನೇರವಾಗಿ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದು.

2. **ಶೈಕ್ಷಣಿಕ ಶುಲ್ಕ ಮರುಪಾವತಿ:** ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಪ್ರಥಮ ಪಿಯು.ಸಿ ಯಿಂದ, ಜಿಮ್ನಾಸ್ಟಿಕ್ಸ್ ಮತ್ತು ಈಜು ಕ್ರೀಡೆಯಲ್ಲಿ 5ನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೆ ವ್ಯಾಸಂಗಮಾಡುತ್ತಿರುವ ಕರ್ನಾಟಕದ ಕ್ರೀಡಾಪಟುಗಳ ಶೈಕ್ಷಣಿಕ ಶುಲ್ಕವನ್ನು ಮರುಪಾವತಿಸಲಾಗುತ್ತಿದೆ.

3. **ಕ್ರೀಡಾಶಾಲೆ/ನಿಲಯ:** ರಾಜ್ಯದಲ್ಲಿ 2 ರಾಜ್ಯ ಮಟ್ಟದ ಕ್ರೀಡಾಶಾಲೆ 5 ಕ್ರೀಡಾ ನಿಲಯಗಳಿದ್ದು, 23 ಜಿಲ್ಲಾ ಕ್ರೀಡಾಶಾಲೆಗಳಿರುತ್ತವೆ. ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ವಿದ್ಯಾನಗರದಲ್ಲಿ 8ನೇ ತರಗತಿಯಿಂದ 10 ತರಗತಿಯ ವರೆಗಿನ ಬಾಲಕ ಮತ್ತು ಬಾಲಕಿಯರಿಗಾಗಿ ಉಚಿತ ವಸತಿ, ಊಟೋಪಹಾರ, ವೈಜ್ಞಾನಿಕ ಕ್ರೀಡಾ ತರಬೇತಿ, ಅತ್ಯುತ್ತಮ ಕ್ರೀಡಾ ಮೂಲಭೂತ ಸೌಕರ್ಯಗಳನ್ನೊಳಗೊಂಡ ಕ್ರೀಡಾಶಾಲೆ ಇದೆ. ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ಪ್ರಥಮ ಪಿ.ಯುಸಿಯಿಂದ ಪದವಿಯವರೆಗೆ ವ್ಯಾಸಂಗ ಮಾಡುವ ಹಿರಿಯ ಬಾಲಕರ ವಸತಿ ನಿಲಯವಿದೆ. ರಾಜ್ಯದ ಆಸಕ್ತ ಮತ್ತು ಕ್ರೀಡಾ ಸಾಮರ್ಥ್ಯವುಳ್ಳ ಆಯ್ದ ಕ್ರೀಡಾಪಟುಗಳು ಪ್ರಯೋಜನ ಪಡೆಯುತ್ತಿದ್ದಾರೆ.

4. **ನಗದು ಪುರಸ್ಕಾರ :** ಮಾನ್ಯತೆ ಪಡೆದ ಕ್ರೀಡಾಕೂಟಗಳಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿ ರಾಷ್ಟ್ರ ಮತ್ತು ಅಂತರರಾಷ್ಟ್ರ ಮಟ್ಟದಲ್ಲಿ ಪದಕ ಗಳಿಸಿದ ಕ್ರೀಡಾಪಟುಗಳಿಗೆ ಈ ಕೆಳಗಿನಂತೆ ನಗದು ಬಹುಮಾನ ನೀಡಲಾಗುತ್ತಿದೆ.

## ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಕ್ರೀಡೆಗಳಲ್ಲಿ ಪದಕ ವಿಜೇತ ಕರ್ನಾಟಕದ ಕ್ರೀಡಾಪಟುಗಳಿಗೆ ನಗದು ಪುರಸ್ಕಾರ ಯೋಜನೆ

| ಕ್ರ.ಸಂ | ವಿವರ | ಚಿನ್ನ (ರೂ.ಗಳಲ್ಲಿ) | ಬೆಳ್ಳಿ (ರೂ.ಗಳಲ್ಲಿ) | ಕಂಚು (ರೂ.ಗಳಲ್ಲಿ) |
|---|---|---|---|---|
| 1 | ಒಲಂಪಿಕ್ | 100.00 ಲಕ್ಷ | 50.00 ಲಕ್ಷ | 25.00 ಲಕ್ಷ |
| 2 | ವಿಶ್ವಕಪ್ | 50.00 ಲಕ್ಷ | 25.00 ಲಕ್ಷ | 10.00 ಲಕ್ಷ |
| 3 | ಕಾಮನ್ ವೆಲ್ತ್ | 25.00 ಲಕ್ಷ | 15.00 ಲಕ್ಷ | 10.00 ಲಕ್ಷ |
| 4 | ಏಷ್ಯನ್ ಚಾಂಪಿಯನ್ ಷಿಪ್/ ಏಷ್ಯನ್ ಗೇಮ್ಸ್ | 10.00 ಲಕ್ಷ | 7.00 ಲಕ್ಷ | 5.00 ಲಕ್ಷ |
| 5 | ಕಿರಿಯರ ಕಾಮನ್‌ವೆಲ್ತ್ | 15.00 ಲಕ್ಷ | 10.00 ಲಕ್ಷ | 5.00 ಲಕ್ಷ |
| 6 | ಸಾರ್ಕ್ / ಎಸ್‌ಎಎಫ್ | 4.00 ಲಕ್ಷ | 2.00 ಲಕ್ಷ | 1.00 ಲಕ್ಷ |
| 7 | ನ್ಯಾಷನಲ್ ಚಾಂಪಿಯನ್ ಷಿಪ್ ಇಂಟರ್ ಸ್ಟೇಟ್ ಇಂಟರ್ ಜೋನಲ್ ಮತ್ತು ಫೆಡರೇಷನ್ ಕಪ್ | 2.00 ಲಕ್ಷ | 1.00 ಲಕ್ಷ | 0.50 ಲಕ್ಷ |
| 8 | ಜೂನಿಯರ್ ನ್ಯಾಷನಲ್ | 0.50 ಲಕ್ಷ | 0.25 ಲಕ್ಷ | 0.15 ಲಕ್ಷ |
| 9 | ಸಬ್ ಜೂನಿಯರ್ ನ್ಯಾಷನಲ್ | 0.25 ಲಕ್ಷ | 0.15 ಲಕ್ಷ | 0.10 ಲಕ್ಷ |

5. **ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ:** ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ರಾಜ್ಯ ಸರ್ಕಾರಿ ನೌಕರ ಕ್ರೀಡಾಪಟುಗಳು ವಿವಿಧ ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗಹಿಸಬಹುದಾಗಿರುತ್ತದೆ. ವಿಜೇತ ಕ್ರೀಡಾಪಟುಗಳನ್ನು ರಾಜ್ಯ ಮಟ್ಟದ ಕ್ರೀಡಾಕೂಟಕ್ಕೆ ನಿಯೋಜಿಸಲಾಗುವುದು. ಈ ಕ್ರೀಡಾಕೂಟದಲ್ಲಿ ಭಾಗವಹಿಸುವ ಎಲ್ಲಾ ರಾಜ್ಯ ಸರ್ಕಾರಿ ನೌಕರರು ಕೆ.ಸಿ.ಎಸ್.ಆರ್. ನಿಯಮಾನುಸಾರ ವಿಶೇಷ ಸಾಂಧರ್ಭಿಕ ರಜೆ ಸೌಲಭ್ಯಕ್ಕೆ ಅರ್ಹರಿರುತ್ತಾರೆ.

6. **ಗ್ರಾಮೀಣ ಕ್ರೀಡೋತ್ಸವ:** ದೇಸೀ, ಜಾನಪದ ಮತ್ತು ಸ್ಥಳೀಯ ಕ್ರೀಡೆಗಳಿಗೆ ಉತ್ತೇಜನ ನೀಡಲು 2014-15ನೇ ಸಾಲಿನಿಂದ ಗ್ರಾಮೀಣ ಕ್ರೀಡೋತ್ಸವವನ್ನು ಯುವ/ ಕ್ರೀಡಾ/ ಸಂಘಸಂಸ್ಥೆಗಳ ಸಹಯೋಗದೊಂದಿಗೆ ಆಯೋಜಿಸಲಾಗುತ್ತಿದೆ. ಇದಕ್ಕಾಗಿ ಪ್ರತಿ ತಾಲ್ಲೂಕಿಗೆ ರೂ. 1.50 ಲಕ್ಷಗಳನ್ನು ಒದಗಿಸಲಾಗುತ್ತಿದೆ.

7. **ಏಕಲವ್ಯ, ಜೀವಮಾನ ಸಾಧನೆ ಮತ್ತು ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ:** ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಅಧಿಕೃತ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಸಾಧನೆ ಮಾಡಿದ ಕರ್ನಾಟಕದ ಕ್ರೀಡಾಪಟುಗಳಿಗೆ ಏಕಲವ್ಯ ಪ್ರಶಸ್ತಿಯನ್ನು (ಪ್ರಶಸ್ತಿ ಮೊತ್ತ: ರೂ. 2.00 ಲಕ್ಷ) ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕ್ರೀಡಾಪಟುಗಳನ್ನು ತಯಾರು ಮಾಡಿ ನಾಡಿಗೆ ಕೊಡುಗೆ ನೀಡಿದ ರಾಜ್ಯದ ತರಬೇತುದಾರರಿಗೆ ಜೀವಮಾನ ಸಾಧನೆ ಪ್ರಶಸ್ತಿಯನ್ನು (ಪ್ರಶಸ್ತಿ ಮೊತ್ತ: ರೂ. 1.50 ಲಕ್ಷ) ದೇಸೀ, ಗ್ರಾಮೀಣ ಕ್ರೀಡೆಗಳಲ್ಲಿ ಭಾಗವಹಿಸಿ ವಿಶೇಷ ಸಾಧನೆ ಮಾಡಿದ ರಾಜ್ಯದ ಕ್ರೀಡಾಪಟುಗಳಿಗೆ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ (ಪ್ರಶಸ್ತಿ ಮೊತ್ತ: ರೂ1.00ಲಕ್ಷ) ಗಳನ್ನು ರಾಷ್ಟ್ರೀಯ ಕ್ರೀಡಾ ದಿನವಾದ ಆಗಸ್ಟ್ 29ರಂದು ನೀಡಿ ಗೌರವಿಸಲಾಗುವುದು.

8. **ಕ್ರೀಡಾ ಪೋಷಕ ಪ್ರಶಸ್ತಿ :** ಕ್ರೀಡಾ ಕ್ಷೇತ್ರದಲ್ಲಿ ಕ್ರೀಡಾಪಟುಗಳಿಗೆ ಅಗತ್ಯ ನೆರವು ನೀಡಿ ಕ್ರೀಡಾ ಸಾಧನೆಗೆ ಉತ್ತೇಜನ ನೀಡುವ ವ್ಯಕ್ತಿ / ಸಂಸ್ಥೆಗಳಿಗೆ ಕ್ರೀಡಾ ಪೋಷಕ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಪ್ರಶಸ್ತಿ ಮೊತ್ತ ರೂ. 5.00 ಲಕ್ಷ.

9. **ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಕ್ರೀಡಾಪಟುಗಳಿಗೆ ಮೀಸಲಾತಿ:** ಅಧಿಕೃತ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಸಾಧನೆ ಮಾಡಿದ ಕರ್ನಾಟಕದ ಕ್ರೀಡಾಪಟುಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಕ್ರೀಡಾ ಮೀಸಲಾತಿಯಡಿ ವೈದ್ಯಕೀಯ, ಇಂಜಿನಿಯರಿಂಗ್, ಪಾಲಿಟೆಕ್ನಿಕ್, ಡಿಪ್ಲೋಮಾ ಮುಂತಾದ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

10. **ಅಕಾಡೆಮಿ ಫಾರ್ ಸ್ಪೋರ್ಟ್ಸ್ ಎಕ್ಸಲೆನ್ಸಿ:** ರಾಷ್ಟ್ರ ಮತ್ತು ಅಂತರರಾಷ್ಟ್ರ ಮಟ್ಟದ ಕ್ರೀಡಾಕೂಟಗಳಲ್ಲಿ ಪದಕ ಗಳಿಸುವಂತಹ ಭರವಸೆವುಳ್ಳ ಪ್ರತಿಭಾವಂತ ಕ್ರೀಡಾಪಟುಗಳಿಗೆ ವೈಜ್ಞಾನಿಕ ತರಬೇತಿ, ನ್ಯೂಟ್ರಿಷನಲ್ ಡಯಟ್ ಫುಡ್, ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಪ್ರಯಾಣ ವೆಚ್ಚ, ಕ್ರೀಡಾ ಕೂಟಗಳಿಗೆ ಅಗತ್ಯವಿರುವ ಕ್ರೀಡಾ ಪರಿಕರಗಳಿಗಾಗಿ ಸಹಾಯಾನುದಾನ ನೀಡಲಾಗುವುದು.

11. **ಕಷ್ಟಪರಿಸ್ಥಿತಿಯಲ್ಲಿರುವ ಕ್ರೀಡಾಪಟುಗಳು ಮತ್ತು ಕುಸ್ತಿದಾರರಿಗೆ ಆರ್ಥಿಕ ನೆರವು :** 50 ವರ್ಷ ಮೀರಿದ ವಾರ್ಷಿಕ ಆದಾಯ ಮಿತಿ ರೂ. 20,000/- ಮೀರದ ರಾಜ್ಯದ ನಿವೃತ್ತ ಕ್ರೀಡಾಪಟು ಹಾಗೂ ಕುಸ್ತಿಪಟುಗಳಿಗೆ ಮಾಸಿಕ ಪಿಂಚಣಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

| **ಕುಸ್ತಿ ಪಟುಗಳಿಗೆ** | | **ಇತರೆ ಕ್ರೀಡಾಪಟುಗಳಿಗೆ** | |
|---|---|---|---|
| ರಾಜ್ಯ ಮಟ್ಟ | ರೂ. 2500 | ರಾಜ್ಯ ಮಟ್ಟ | ರೂ. 1000 |
| ರಾಷ್ಟ್ರ ಮಟ್ಟ | ರೂ. 3000 | ರಾಷ್ಟ್ರ ಮಟ್ಟ | ರೂ. 1500 |
| ಅಂತರರಾಷ್ಟ್ರ ಮಟ್ಟ | ರೂ. 4000 | ಅಂತರರಾಷ್ಟ್ರ ಮಟ್ಟ | ರೂ. 2000 |

12. **ಗ್ರಾಮೀಣ ಕ್ರೀಡಾ ಕೇಂದ್ರಗಳು:** ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಸರ್ಕಾರಿ ಶಾಲೆಗಳನ್ನು ಗ್ರಾಮೀಣ ಕ್ರೀಡಾ ಕೇಂದ್ರಗಳೆಂದು ಗುರುತಿಸಿ, ಈ ಕ್ರೀಡಾಪಟುಗಳಿಗೆ ದೈನಂದಿನ ತರಬೇತಿ ನೀಡಲು ಅಗತ್ಯ ಕ್ರೀಡಾ ಸಾಮಗ್ರಿ, ಕ್ರೀಡಾಪಟುಗಳಿಗೆ ಕ್ರೀಡಾ ಗಂಟು, ಇಲಾಖೆಯ ತರಬೇತುದಾರರಿಂದ ವೈಜ್ಞಾನಿಕ ಕ್ರೀಡಾ ಮಾರ್ಗದರ್ಶನ ನೀಡಲಾಗುವುದು.

13. **ಒಳಾಂಗಣ ಕ್ರೀಡಾಂಗಣ ಮತ್ತು ಬಯಲು ರಂಗಮಂದಿರಗಳ ನಿರ್ಮಾಣಕ್ಕೆ ಅನುದಾನಗಳು:** ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿರುವ ಪ್ರತಿ ತಾಲ್ಲೂಕಿನ ಒಂದು ಶಾಲೆ ಅಥವಾ ಕ್ರೀಡಾಂಗಣದಲ್ಲಿ ಬಯಲು ರಂಗಮಂದಿರ ಮತ್ತು ಒಳಾಂಗಣ ಕ್ರೀಡಾಂಗಣ ನಿರ್ಮಿಸಲು ವೆಚ್ಚ ಭರಿಸಲಾಗುವುದು.

14. **ವಿದ್ಯಾರ್ಥಿ / ವಿದ್ಯಾರ್ಥಿಯೇತರರಿಗೆ ಧನಸಹಾಯ :** ರಾಷ್ಟ್ರ ಮತ್ತು ಅಂತರರಾಷ್ಟ್ರ ಮಟ್ಟದ ಕ್ರೀಡಾಕೂಟದ ಸ್ಪರ್ಧೆಗಳಲ್ಲಿ ಆಯ್ಕೆಯಾಗಿ ಭಾಗವಹಿಸಿದ ಜಿಲ್ಲೆಯ ಕ್ರೀಡಾ ಪಟುಗಳಿಗೆ/ ಯುವಜನರಿಗೆ ಧನ ಸಹಾಯ. ಗರಿಷ್ಠ ರೂ. 25,000/-

15. **ಕರ್ನಾಟಕ ಕ್ರೀಡಾ ಪ್ರಾಧಿಕಾರ:** ಕರ್ನಾಟಕ ಕ್ರೀಡಾ ಪ್ರಾಧಿಕಾರದ ವತಿಯಿಂದ ರಾಜ್ಯದ ವಿವಿಧ ಕ್ರೀಡಾ ಸಂಸ್ಥೆಗಳಿಗೆ ಅಧಿಕೃತ ಕ್ರೀಡಾಕೂಟಗಳನ್ನು ಸಂಘಟಿಸಲು ಅನುದಾನ ನೀಡಲಾಗುವುದು.

16. **ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆ:**

- ಕ್ರೀಡೆಗೆ ಆದ್ಯತೆ: ಪೋಷಕರಿಗೆ ಭದ್ರತೆ: ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪಂಗಡದ ಕ್ರೀಡಾಪಟುಗಳ ಪೋಷಕರಿಗೆ ಆರ್ಥಿಕ ಭದ್ರತೆ ನೀಡುವ ಮೂಲಕ ಕ್ರೀಡಾಪಟುಗಳಿಗೆ ಉತ್ತೇಜನ ನೀಡಲು ರಾಜ್ಯ ಮಟ್ಟ ರೂ. 25,000/- ರಾಷ್ಟ್ರ ಮಟ್ಟ ರೂ. 50,000/- ಅಂತರರಾಷ್ಟ್ರ ಮಟ್ಟ ರೂ. 1.00 ಲಕ್ಷಗಳ ನಗದು ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಗುವುದು.
- ಪರಿಶಿಷ್ಟ ಜಾತಿ ಮತ್ತು ಪಂಗಡದ ಆಸಕ್ತ ಯುವಜನರಿಗೆ ಮತ್ತು ಕ್ರೀಡಾಪಟುಗಳಿಗೆ ಭೂಸಾಹಸ, ಜಲಸಾಹಸ ಮತ್ತು ಪೈಲಟ್ ತರಬೇತಿಯನ್ನು ಲೈಸೆನ್ಸ್‌ನೊಂದಿಗೆ ಉಚಿತವಾಗಿ ನೀಡುವ ಮೂಲಕ ಉದ್ಯೋಗ ಪಡೆಯಲು ಅಗತ್ಯ ನೆರವು ನೀಡಲಾಗುತ್ತಿದೆ.
- ಪರಿಶಿಷ್ಟ ಜಾತಿ / ಪಂಗಡದ ರಾಷ್ಟ್ರ ಮತ್ತು ಅಂತರರಾಷ್ಟ್ರ ಮಟ್ಟದ ಕ್ರೀಡಾ ಪಟುಗಳಿಗೆ ಜಿಮ್ ಸ್ಥಾಪಿಸುವ ಮೂಲಕ ಸ್ವಾವಲಂಬಿಗಳನ್ನಾಗಿ ರೂಪಿಸಲು ಜಿಮ್ ಸಾಮಗ್ರಿಗಳನ್ನು ಒದಗಿಸಲಾಗುತ್ತಿದೆ.
- ಪರಿಶಿಷ್ಟ ಜಾತಿ/ ಪಂಗಡದ ಆಡಳಿತ ಮಂಡಳಿ ಹೊಂದಿರುವ ಶಾಲೆ/ ಸಂಘ ಸಂಸ್ಥೆಗಳಿಗೆ ಜಿಮ್ ಸಾಮಗ್ರಿಗಳನ್ನು ಒದಗಿಸಲಾಗುತ್ತಿದೆ.

---